## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ದಿವಂಗತ ಶ್ರೀ ಮೋಹನ್ ಕುಮಾರ್.ಕೆ.ಸಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ರಟ್ಟೆಹಳ್ಳಿ ಇವರ ಮರಣಾ ನಂತರದ ಶವಸಂಸ್ಕಾರದ ಮೊತ್ತ ಪಾವತಿಸುವ ಬಗ್ಗೆ.

**ಓದಲಾಗಿದೆ:**
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾವೇರಿ ಇವರ ಪತ್ರ ಸಂಖ್ಯೆ:ಹಾಜಿಪಂ/ಆ-5/ಕಾನಿಅ/ಉಪದಾನ/ವಹಿ/329/2021-22 (ಇಆಸಂ/3070) 3083, ದಿನಾಂಕ:18.02.2022.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 167 ಎಇಎಸ್ 2019, ದಿ:16.11.2019.

* * * * *

**ಪ್ರಸ್ತಾವನೆ :-**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರು **ದಿವಂಗತ ಶ್ರೀ ಮೋಹನ್ ಕುಮಾರ್.ಕೆ.ಸಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ರಟ್ಟೆಹಳ್ಳಿ** ಇವರು ಸರ್ಕಾರಿ ಸೇವೆಯಲ್ಲಿರುವಾಗಲೇ **ದಿ:10.08.2021ರಂದು** ಮರಣ ಹೊಂದಿದ್ದು, ಸದರಿಯವರ ಶವ ಸಂಸ್ಕಾರ ಮೊತ್ತವನ್ನು ಪಾವತಿ ಮಾಡುವಂತೆ ಮೃತ ಅಧಿಕಾರಿಯ ಧರ್ಮಪತ್ನಿ **ಶ್ರೀಮತಿ ಪಾರ್ವತಿ.ಎಂ** ಇವರು ತಮಗೆ ಸಲ್ಲಿಸಿರುವ ಮನವಿಯನ್ನು ಸೂಕ್ತ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿನ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚಿಯನ್ವಯ ಕೂಲಂಕಷವಾಗಿ ಪರಿಶೀಲಿಸಲಾಗಿರುತ್ತದೆ. **ದಿವಂಗತ ಶ್ರೀ ಮೋಹನ್ ಕುಮಾರ್ ಕೆ.ಸಿ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಇವರು ಸರ್ಕಾರದಲ್ಲಿ ಸ್ಥಳ ನಿರೀಕ್ಷಣೆಯಲ್ಲಿದ್ದ ಅವಧಿಯಲ್ಲಿ ಮೃತರಾಗಿರುವ ಹಿನ್ನಲೆಯಲ್ಲಿ **ಸದರಿಯವರ ಧರ್ಮಪತ್ನಿಗೆ (ವಾರಸುದಾರರು) ನಿಯಮಾನುಸಾರ ರೂ.5000/-ಗಳ ಶವಸಂಸ್ಕಾರ** ಮೊತ್ತವನ್ನು ಮಂಜೂರು ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: RDPR 72 PRV 2021, ದಿ:14.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **ದಿವಂಗತ ಶ್ರೀ ಮೋಹನ್ ಕುಮಾರ್ ಕೆ.ಸಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಇವರ ಧರ್ಮಪತ್ನಿಗೆ (ವಾರಸುದಾರರು) ರೂ.5000/-ಗಳ ಶವಸಂಸ್ಕಾರ ಮೊತ್ತವನ್ನು ಮಂಜೂರು ಮಾಡಿ ಆದೇಶಿಸಿದೆ.**

ಇ -office

**ಸದರಿ ಮೊತ್ತವನ್ನು ಸೆಳೆಯಲು ಮತ್ತು ಬಟವಡೆ ಮಾಡಲು ಅನುವಾಗುವಂತೆ DEVELOPMENT COMMISSIONER, DEPARTMENT OF RURAL DEVELOPMENT AND PANCHAYAT RAJ, BENGALURU-09 ಇವರನ್ನು ಪ್ರಾಧಿಕರಿಸಿದೆ.**

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

14/06/2022
**(ಬಾಲಪ್ಪ)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ.ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
14/6/22

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಹೊಸ ಕಟ್ಟಡ, ಬೆಂಗಳೂರು-1.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾವೇರಿ-ಇವರ ಮುಖಾಂತರ.
3. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಬೆಂಗಳೂರು.
4. ಸಂಬಂಧಿಸಿದ ಅಧಿಕಾರಿಯ ವಾರಸುದಾರರಿಗೆ.
5. ಮೇಲ್ವಿಚಾರಕರು,ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.